ನಂಬಿಕೆ ಇಲ್ಲದ್ದರಿಂದ ಅವತ್ತಿನ ಮನೆಕೆಲಸಗಳನ್ನೆಲ್ಲಾ ಮರುದಿನಕ್ಕೆ ಮಿಗಿಸಿಡದೆ ನಾನೇ ಮಾಡಿಕೊಂಡೆ.

★★★

ನಾ ಅಂದುಕೊಂಡಂತೇನೂ ಆಗಲಿಲ್ಲ. ಮರುದಿನ ಯಾವತ್ತಿನ ಹೊತ್ತಿಗೆ ಕೆಲಸಕ್ಕೆ ಹಾಜರಾದವಳನ್ನು ಕುತೂಹಲದಿಂದ ಗಮನಿಸಿದೆ. ಹೊಸಬಿಯಂತೆ ಕಾಣುತ್ತಿದ್ದಳು ಕಾಂತಿ. ಕಿವಿಯ ಸಾದಾ ಓಲೆಗೆ ಅಗ್ಗದ ಜುಮುಕಿ ನೇತಾಡುತ್ತಿದೆ. ಕೊರಳಿನಲ್ಲಿ ಮುತ್ತಿನ ಹಾರ. ಕೈಗಳಲ್ಲಿ ಹಸಿರುಬಣ್ಣದ ವರ್ಕಿನ ಬಳೆಗಳು. ಕೈಕಾಲಿನ ಉಗುರುಗಳಿಗೆ ಬಣ್ಣದ ಲೇಪನ. ಜಡೆಯಲ್ಲಿ ನೇತಾಡುತ್ತಿರುವ ಬಣ್ಣ ಮಾಸಿದ ಮಲ್ಲಿಗೆ ಮಾಲೆ. ಬಹುಶಃ ರಾತ್ರಿ ಮಲಗುವಾಗ ತೆಗೆದಿಟ್ಟು ಮತ್ತೆ ಬೆಳಿಗ್ಗೆ ಮುಡಿದು ಬಂದಿರುವಂತಾದ್ದು. ಬಿಸಾಕಲು ಮನಸ್ಸು ಬರದೇ ಇದ್ದದ್ದು.

"ಯಾವಾಗ ಮದುವೆ? ದಿನ ಇಟ್ಟಾಯ್ತಾ?" ವಿಚಾರಿಸಿದೆ.

"ಎರಡನೇ ಕಾರ್ತೀಕಕ್ಕೆ. ಅವರು ಅರ್ಜೆಂಟ್ ಮಾಡಿದ್ರೆ ದುಡ್ಡು ಬೇಕಲ್ಲ? ತಕ್ಷಣಕ್ಕೆ ಆಗಲ್ಲ ಅಂದಿದಾರೆ ಅಪ್ಪ..."

ಅದೆಂತದೋ ಎರಡನೇ ಕಾರ್ತೀಕ ಅಂದರೆ? ಕೆದಕಿ ತಿಳಿದುಕೊಳ್ಳಲು ಹೋಗಲಿಲ್ಲ. ನಮ್ಮದೇನಿದ್ದರೂ ತಾರೀಖಿನ ಲೆಕ್ಕ. ಸದ್ಯಕ್ಕಂತೂ ಇವಳು ಕೆಲಸಕ್ಕೆ ಬರುತ್ತಾಳೆ ಎಂದು ಒಂದು ಬಗೆಯ ನಿರಾಳ. ನಿಶ್ಚಿತಾರ್ಥ ಆದ ಹುಡುಗಿಯರು ಭವಿಷ್ಯದ ಕನಸು ಕಾಣುತ್ತಾ ದಿನಚರಿಯ ಕೆಲಸಗಳ ಕುರಿತು ಒಂದು ಅವಜ್ಞೆಯಿಂದ ವರ್ತಿಸುತ್ತಾರೆ ಎನ್ನುವ ನನ್ನ ತಿಳಿವಳಿಕೆ ತಪ್ಪು ಎನ್ನುವಂತೆ ಕಾಂತಿ ಯಥಾಸಾವಕಾಶವಾಗಿ ತನ್ನ ಕೆಲಸ ಮಾಡಿ ಮುಗಿಸಿದಳು. ಅವಳ ವರ್ತನೆ ಯಾವ ಭಾವಾತಿರೇಕವಿಲ್ಲದೆ ಎಷ್ಟು ತಣ್ಣಗಿತ್ತು ಅಂದರೆ ಬೆಳಿಗ್ಗೆ ಉಪಯೋಗಿಸಿ ಕಸದ ಬುಟ್ಟಿಯ ಬಳಿ ಬಿಸಾಡಿದ್ದ ನಂದಿನಿ ಹಾಲಿನ ಖಾಲಿ ಕವರುಗಳನ್ನು ಯಾವತ್ತಿನಂತೆ ದೊಡ್ಡ ಕವರೊಂದರಲ್ಲಿ ಶೇಖರಿಸಿಡುವುದನ್ನು ಕೂಡಾ ಮರೆಯಲಿಲ್ಲ. ನಾನೇ ಸೂಕ್ಷ್ಮವಾಗಿ ಅವಳನ್ನು ಗಮನಿಸುತ್ತಿದ್ದೇನೆಯೋ ಅಥವಾ ಎಂತಾ ಸಂದರ್ಭದಲ್ಲೂ ಸ್ಥಿತಪ್ರಜ್ಞಳಂತಿರುವುದು ಅವಳ ಸ್ವಭಾವವೋ ಗೊತ್ತಾಗದ ಪರಿಸ್ಥಿತಿ. ಕೆಲಸ ಮುಗಿಸಿ ಅವಳು ಹೊರಟು ಹೋದ ಮೇಲೆ ಅವಳು ಹೇಳಿದ ಒಂದು ಮಾತು ತಲೆ ತಿನ್ನತೊಡಗಿತು. 'ಅವರು ಅರ್ಜೆಂಟ್ ಮಾಡಿದ್ರೆ ದುಡ್ಡು ಬೇಕಲ್ಲ?' ಅಂದಿದ್ದಳು ಕಾಂತಿ. ಎಷ್ಟೇ ಬಡತನದ ಮದುವೆ ಅಂದರೂ ದುಡ್ಡೆನ್ನುವುದು ಬೇಕೇಬೇಕಲ್ಲ? ವರ್ಷಗಟ್ಟಲೆ ಕಂಡವರ ಮನೆಯಲ್ಲಿ ಚಾಕರಿ ಮಾಡಿದ್ದಾಳೆ ಕಾಂತಿ. ಆದರೆ ನಯಾಪೈಸೆ ಉಳಿಸಿದ್ದಿಲ್ಲ. ಎಲ್ಲವನ್ನೂ ಅಮ್ಮನ ಕೈಗೆ ಕೊಟ್ಟು ಕೈ ಮುಗಿಯುತ್ತಾಳೆ. ತಂಗಿಯ ಗಂಡ ಬಂದಾಗ ನಾಚಿಕೆ ಬಿಟ್ಟು ಇವಳ ಹತ್ತಿರ ಕುಡಿತಕ್ಕೆ ದುಡ್ಡು ಕೇಳುತ್ತಾನಂತೆ. ಮತ್ತು ಅವನು ಯಾವಾಗಲೂ ಬರುವುದು ಇವಳ ಕೈಗೆ ದುಡ್ಡು ಸಿಗುವ ತಿಂಗಳ ಮೊದಲ ದಿನಗಳಲ್ಲಿ. ಇವಳ ಅಪ್ಪ ಕೂಡಾ ಕಡಿಮೆ ಆಸಾಮಿಯೇನಲ್ಲ. ರಸ್ತೆ ಅಳೆಯುತ್ತಾ ಹೋಗುವುದನ್ನು ನಾನೇ ಎಷ್ಟೋ ಸಲ ನೋಡಿದ್ದೇನೆ. ಅಮ್ಮ, ಮಗಳು ಕಂಡವರ ಮನೆಗಳಲ್ಲಿ ದುಡಿದು ಸಂಸಾರದ ಬಂಡಿ ಎಳೆಯುತ್ತಿದ್ದಾರೆ. ಆಹಾ, ಎಷ್ಟು ಸಲೀಸಾಗಿ ಹೇಳಿಬಿಟ್ಟಳು ಕಾಂತಿ, 'ಅದ್ಯಾವ ಗಂಡಸ್ರು ಕುಡಿಯಲ್ಲ ಹೇಳಿ ಅಕ್ಕಾ...' ಅಂತ. ನಾಳೆ ಇವಳ ತಂಗಿಯ ಹಾಗೆ ಇವಳೂ ಮೂರು ಮೂರು ದಿನಕ್ಕೊಮ್ಮೆ ತೌರಿಗೆ ಓಡಿ ಬಂದು, ಛೇ ಛೇ, ಹಾಗಾಗದಿರಲಿ ಎಂದು ಮನಸಾ ಹೇಳಿಕೊಂಡೆ. ನಾಳೆ ಅವಳ ಮದುವೆಯಾಗುವಾಗ ನನ್ನ ಕೈಲಾದಷ್ಟು ಸಹಾಯ ನಾನು ಮಾಡಲೇಬೇಕು. ಮೂರೋ, ನಾಲ್ಕೋ ಸಾವಿರ ಉಡುಗೊರೆಯ ರೂಪದಲ್ಲಿ ಕೊಟ್ಟು, ಕಾಂತಿಯ ಬಗ್ಗೆ ನನ್ನಲ್ಲೊಂದು ಸಹಾನುಭೂತಿ ಬೆಳೆದುಬಿಟ್ಟಿದೆಯಾ? ಇರಬಹುದೇನೋ...

★★★